ಪ್ರಬಂಧ

# ತಡಿಯೆಂದರೆ ಬರಿ ತಡಿಯಲ್ಲವೊ





ಸಮುದ್ಯತಾ ವೆಂಕಟ್ರಾಮು
ಕಲೆ: ಸಂತೋಷ್ ಸಸಿಹಿತ್ಲು

ಹಾಸ್ಗೆ ರಿಪೇರಿ... ತಡೀ ರಿಪೇರಿ... ಹಾಸ್ಗೆ ರಿಪೇರಿ... ಮಂದ್ರ ಮಧ್ಯಮ ತಾರಕದಲ್ಲಿ ದಿನವೂ ಕೇಳಿಬರುವ ಧ್ವನಿ ಮುದ್ರಿತ ಲಯಬದ್ಧ ಕೂಗು ಇಂದೇಕೋ ಬದಲಾಗಿ ಬೇರೆ ಕೇಳುತ್ತಿದೆಯಲ್ಲ ಎಂದು ನೋಡುತ್ತ ನಿಂತಾಗ ಆತನಿಗೆ ಆಸೆ ಹುಟ್ಟಿತೇನೋ, ಬಂದು ಕೇಳಿದ, 'ಇವೆಯಾ ಅಮ್ಮ ಹಾಸ್ಗೆಗಳು ರಿಪೇರಿಗೆ?'

'ಇಲ್ಲ ಕಣಪ್ಪ, ಮೊನ್ನೆ ತಾನೇ ಮಾಡ್ಸಿದೇವೆ' ಎಂದಾಗ ಸುಮ್ಮನೆ ಹೋದ. ಕೊರೋನಾ ಶುರುವಾದಾಗಿನಿಂದ ಇವರ ಸಂಖ್ಯೆ ಜಾಸ್ತಿಯಾಗಿದೆ. ನಮ್ಮ ಊರುಗಳಲ್ಲಿ ಯಾರು ಆಪಾಟಿ ಹಾಸಿಗೆ ಮಾಡಿಸೋರು! ಪಾಪ ದಿನಾ ಬರ್ತಾರೆ ಎಂದು ಮೊದಲಿಗೆ ಇವರ ಬಗ್ಗೆ ಅನುಕಂಪ ತೋರಿಸಿದ್ದಿತ್ತು. ನಂತರ ಸಣ್ಣ ಗುಮಾನಿಯೂ ಶುರುವಾಯ್ತಪ್ಪಾ.

ಅಲ್ಲಾ ಇವರೇನಾದ್ರೂ ಸ್ಕೆಚ್ ಹಾಕ್ಕೊಂಡು ಮನೆಗಳನ್ನೆಲ್ಲಾ ನೋಡ್ಕೊಂಡು ಹೋಗಲಿಕ್ಕೆ ಬರೋವ್ರಾ! ಯಾರನ್ನೂ ನಂಬೋಹಾಗಿಲ್ಲಪ್ಪಾ ಮತ್ತೆ ಎಂಬ ಉವಾಚಗಳೂ ಕೇಳಿ ಬರುತ್ತಿದ್ದವು. ಕ್ರಮೇಣ ತರಕಾರೀ, ಮಂಡಕ್ಕೀ ಹಳೇಪೇಪರ್ ಗುಜರೀಗಳಂತೆಯೇ ಇವರ ಕೂಗೂ ಮಾಮೂಲೆನಿಸಿಬಿಟ್ಟಿತು.

ನಮ್ಮ ಪಕ್ಕದ ಮನೆಯ ಮಕ್ಕಳೂ ಹಾಸ್ಗೆ ರಿಪೇರಿ ಎಂದು ಲಯಬದ್ಧವಾಗಿ ಕೂಗುವುದನ್ನು ಕಲಿತಿದ್ದು ನಡುನಡುವೆ ಅವರ ಕೂಗೂ ಕೇಳಿಬರುತ್ತಿತ್ತು.

ನಮ್ಮ ಹಾಸಿಗೆಯೊಂದನ್ನು ರಿಪೇರಿ ಮಾಡಿಸೋಣವೆಂದರೆ ನಮ್ಮ ಮನೆಯವರು ಒಪ್ಪಿರಲಿಲ್ಲ. ಕೊನೆಗೆ ನಮ್ಮ ಪಕ್ಕದಮನೆಯವರು ಅವರ ಮನೆಯಂಗಳದಲ್ಲಿ ಕೆಲಸ ಮಾಡಿಸಿದ ನಂತರ ಒಂದು ಶುಭ ಮುಹೂರ್ತದಲ್ಲಿ ನಮ್ಮದೊಂದು ಹಾಸಿಗೆ ಹಳೆಯ ಬಟ್ಟೆ ಕಳಚಿ ಹತ್ತಿಗಳನ್ನೆಲ್ಲ ಯಂತ್ರವೊಂದರಲ್ಲಿ ಚಕಚಕನೆ ಪಿಡಿಸಿಕೊಂಡು ಹೊಸಬಟ್ಟೆಯನ್ನು ಧರಿಸಿ ಮತ್ತೆ ಮರುಹುಟ್ಟು ಪಡೆಯಿತು.

ಅದೇ ಆತ್ಮ, ಬೇರೆ ದೇಹ. ಹಾಸಿಗೆಗೆ ಮಾತ್ರ ಈ ಭಾಗ್ಯ ಅದೂ ಯಾವಾಗ ಅಂದರೆ ಒಳಗಿನ ಹತ್ತಿ ಚೆನ್ನಾಗಿದ್ದು ಮೇಲಿನ ಬಟ್ಟೆ ಹಾಳಾಗಿದ್ದರೆ ಮಾತ್ರ ಪುನರಪಿ ಜನನ ಸಾಧ್ಯ.